## ಎ.ಜೆ.ಇಂಜಿನಿಯರಿಂಗ್ ಕಾಲೇಜಿನಲ್ಲಿ ಗಣೇಶ್ ಪ್ರಭು ಹೇಳಿಕೆ

# ತಂತ್ರಜ್ಞಾನದಿಂದ ಸಕಾರಾತ್ಮಕ ಪರಿಣಾಮ




ಎ.ಜೆ. ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಎಂಸಿಎ ವಿಭಾಗದ 'ಇನ್ ವೋಟಿಯಾ' ಎಂಬ ನೂತನ ಸಂಘ ಉದ್ಘಾಟನೆಗೊಂಡಿತು. ಆರ್ಕಿಟೆಕ್ಟ್ ಗಣೇಶ್ ಪ್ರಭು, ಡೀನ್ ಡಾ.ಮಹಾಬಲೇಶ್ವರಪ್ಪ ಪಿ., ಪ್ರಾಂಶುಪಾಲ ಡಾ.ಶಾಂತಾರಾಮ ರೈ ಸಿ. ಮೊದಲಾದವರಿದ್ದರು.

ಮಂಗಳೂರು: ಕೊಟ್ಟಾರ ಚೌಕಿಯ ಎ.ಜೆ. ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಎಂಸಿಎ ವಿಭಾಗದ 'ಇನ್‌ವೋಟಿಯಾ' ಎಂಬ ನೂತನ ಸಂಘ ಉದ್ಘಾಟನೆಗೊಂಡಿತು.

ಇನ್ಫೋಸಿಸ್‌ನ ಹಿರಿಯ ಐಟಿ ಪ್ರೊಫೆಷನಲ್ ಮತ್ತು ಸಾಫ್ಟ್‌ವೇರ್ ಆರ್ಕಿಟೆಕ್ಟ್ ಗಣೇಶ್ ಪ್ರಭು ಮಾತನಾಡಿ, ಮಕ್ಕಳು, ಪಾಲಕರು ಮತ್ತು ಶಿಕ್ಷಕರನ್ನು ಸಬಲೀಕರಣಗೊಳಿಸುವಲ್ಲಿ ಹಾಗೂ ಸಮಾಜದ ಮೇಲೆ ಸಕಾರಾತ್ಮಕ ಪರಿಣಾಮ ಬೀರಲು ಈ ಉದಯೋನ್ಮುಖ ತಂತ್ರಜ್ಞಾನಗಳನ್ನು ಬಳಸಿಕೊಳ್ಳಬಹುದಾಗಿದೆ ಎಂದರು.

ಸಂಸ್ಥೆಯ ಡೀನ್ ಡಾ.ಮಹಾಬಲೇಶ್ವರಪ್ಪ ಪಿ. ಮಾತನಾಡಿ, ವಿದ್ಯಾರ್ಥಿಗಳ ತಾಂತ್ರಿಕ ಮತ್ತು ವೃತ್ತಿಪರ ಕೌಶಲಗಳನ್ನು ಹೆಚ್ಚಿಸುವಲ್ಲಿ ಸಂಘದ ಪ್ರಮುಖ ಪಾತ್ರ ವಹಿಸಲಿದೆ ಎಂದರು.

ಪ್ರಾಂಶುಪಾಲ ಡಾ.ಶಾಂತಾರಾಮ ರೈ ಸಿ. ಅಧ್ಯಕ್ಷತೆ ವಹಿಸಿದ್ದರು. ಎಂಸಿಎ ವಿಭಾಗದ ಮುಖ್ಯಸ್ಥ ಡಾ.ವಿಜೇಶ್ ಕೆ. ಉಪಸ್ಥಿತರಿದ್ದರು.

ಸಂಘದ ಅಧ್ಯಕ್ಷ ಪ್ರಯಾಗ್ ನಾಯ್ಕ್ ಸ್ವಾಗತಿಸಿದರು. ಸಂಘದ ಉಪಾಧ್ಯಕ್ಷೆ ದಿವ್ಯಲಕ್ಷ್ಮೀ ಪ್ರಸ್ತಾವಿಸಿದರು. ಚಿಂಜಣ್ಣಾ ವಂದಿಸಿದರು.